# ಆಹಾ ಸುದ್ದಿ!

★ ಸಸಿತೋಟ



ಅಮೆರಿಕಾದ ಬಿರುಗಾಳಿಯ ಬೇಟೆಗಾರ ಅಲೆಕ್ಸ್ ಬಿರುಗಾಳಿಯ ಮಧ್ಯೆಯೇ ತನ್ನ ಗೆಳತಿಗೆ ಮದುವೆಯ ಪ್ರಸ್ತಾವ ಮಾಡಿದನಂತೆ. ತನ್ನ ಇಬ್ಬರು ಅತ್ಯಂತ ಪ್ರೀತಿ ಪಾತ್ರರನ್ನು ಜೊತೆಗೂಡಿಸುವುದು ಆತನ ಜೀವನದ ಹೆಬ್ಬಯಕೆ ಆಗಿತ್ತಂತೆ. ಒಂದಲ್ಲ, ಎರಡು ಬಿರುಗಾಳಿಯ ಮಧ್ಯೆ ಸಿಕ್ಕಿಬಿದ್ದಿದ್ದಾನೆ ಅಲೆಕ್ಸ್!



ಚೀನಾದ ಈ ಕುಂಗ್ ಫು ಮಾಸ್ಟರ್ ತನ್ನ ಶಕ್ತಿಯನ್ನು ವಿಶಿಷ್ಟವಾಗಿ ತೋರಿಸಿದ್ದಾನೆ. 13 ಟನ್ ತೂಗುವ ಬಸ್ ಅನ್ನು ತನ್ನ ಮರ್ಮಾಂಗದಿಂದ ಎಳೆದು ಹಾಕಿದ್ದಾನಂತೆ ಈ ಭೂಪ. ಚೀನಾದಲ್ಲಿ ಈ ಭಾಗದ ಮೇಲೆ ಕೇಂದ್ರೀಕೃತವಾದ ಕುಂಗ್ ಫು ಕಲೆ ಜನಪ್ರಿಯವಾಗಿದೆಯಂತೆ. ಇದರ ಅಂತಿಮ ಗುರಿ ಹೆಂಗಳೆಯರನ್ನು ಗೆಲ್ಲಲು ಎಂಬುದು ಮಾತ್ರ ರಹಸ್ಯವಾಗೇನೂ ಉಳಿದಿಲ್ಲವಂತೆ.



ಈ ಜೋಡಿ ನ್ಯೂಯಾರ್ಕ್‌ನಲ್ಲಿ ನಡೆದ ಮ್ಯಾರಥಾನ್ ನಡುವೆಯೇ ಸುಲಗ್ನಾ ಸಾವಧಾನ ಎಂದು ಹೇಳಿಸಿಕೊಂಡರಂತೆ. ಓಟದ ನಡುವೆ ಪಾರ್ಕ್ ಒಂದರಲ್ಲಿ ವಿವಾಹದ ವಿಧಿವಿಧಾನಗಳು ನಡೆದು, ನಂತರ ಈ ಮ್ಯಾರಥಾನ್ ಪೂರ್ಣಗೊಳಿಸಿದರಂತೆ. ಮದುವೆಯೂ ರೇಸ್‌ನಂತೆ, ಒಂದರ ಮೇಲೆ ಇನ್ನೊಂದನ್ನು ಗೆಲ್ಲುತ್ತ ಹೋಗುವಂತೆ ಹುಡುಗಿಯರನ್ನು ಗೆಲ್ಲುತ್ತ ಹೋಗುವುದು ಎಂದು ತಿಳಿದುಕೊಂಡರೆ ಕಷ್ಟ.

ಚೀನಾದ ಗಾವೊ ಎಂಬಾತ ತನ್ನ ಮನೆಯಲ್ಲಿ ಅಡಗಿಸಿಟ್ಟ 50 ಸಾವಿರ ಯುವಾನ್ (ಸುಮಾರು 4,70,000 ರೂಪಾಯಿ) ಅನ್ನು ಆತನ ಐದು ವರ್ಷ ವಯಸ್ಸಿನ ಮಗ ಹುಡುಕಿ ಚೂರು ಚೂರು ಮಾಡಿ ಆಟ ಆಡಿದನಂತೆ. ಹೆಚ್ಚಿನ ನೋಟುಗಳು 3–4 ಭಾಗಗಳಾಗಿದ್ದರಿಂದ ಬ್ಯಾಂಕ್‌ನವರು ಹೊಸ ನೋಟು ನೀಡಲು ನಿರಾಕರಿಸಿದರಂತೆ. ಮಗುವನ್ನು ಒಂಟಿಯಾಗಿ ಮನೆಯಲ್ಲಿ ಬಿಡಬೇಡಿ, ಅದೂ ಬೆಲೆಬಾಳುವ ವಸ್ತುವಿನ ಜೊತೆ ಎಂದು ಗಾವೊ ಈಗ ಗಾನಾ ಬಜಾನಾ ಮಾಡುತ್ತಿರಬಹುದು.

ಇದು ಇಂಡೋನೇಷ್ಯಾದ ಕಾಂಪಂಗ್ ಪೆಲಾಂಗಿ ಎಂಬ ಗ್ರಾಮ. ಈಗ ಇಲ್ಲಿರುವ ಸುಮಾರು 250ಕ್ಕೂ ಅಧಿಕ ಮನೆಗಳು ತರಾವರಿ ರಂಗು ಬಳಿದುಕೊಂಡು ಇದು ಕಾಮನಬಿಲ್ಲು ಗ್ರಾಮವಾಗಿದೆಯಂತೆ. ಕೆಲಸವಿಲ್ಲದೆ ಕೂತಿದ್ದ ಜನ ಈಗ ಪ್ರವಾಸಿಗರ ದಂಡಿಗೆ ಸೇವೆ ಮಾಡಿ ಕೈತುಂಬ ದುಡ್ಡು ಗಳಿಸುತ್ತಿದ್ದಾರಂತೆ. ಇದೆಲ್ಲ ಅಲ್ಲಿಯ ಹೈಸ್ಕೂಲಿನ ಮುಖ್ಯೋಪಾಧ್ಯಾಯನ ನೋಡಿ ಕಲಿ, ಮಾಡಿ ತಿಳಿ ಐಡಿಯಾವಂತೆ.



ಜಪಾನಿನಲ್ಲಿ ಟೆಕ್ಕಿಗಳಿಗೆ ಬೆಕ್ಕಿನ ಭತ್ಯೆ ಕೊಡುತ್ತಿದ್ದಾರಂತೆ. ಕಚೇರಿಯಲ್ಲಿ ಉದ್ಯೋಗಿಗಳ ಕಾರ್ಯಕ್ಷಮತೆ ಹೆಚ್ಚಿಸಲು ಮುದ್ದಿನ ಬೆಕ್ಕನ್ನು ಜೊತೆಗೆ ಒಯ್ದು ಆಟ ಆಡಬಹುದಂತೆ. ಜೊತೆಗೆ ಹಣ ಬೇರೆ. ಕಳ್ಳ ಬೆಕ್ಕಿನಿಂದ ಕೆಲಸ ಕದಿಯುವ ಚಟ ಕಲಿತುಕೊಳ್ಳಲು ಇನ್ನಷ್ಟು ಅನುಕೂಲ ಆಗಬಹುದು.